ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಬೆಂಗಳೂರು, ಮಂಗಳವಾರ, ೦೪, ಆಗಸ್ಟ್, ೨೦೨೬ (ಶ್ರಾವಣ, ೧೩, ಶಕವರ್ಷ, ೧೯೪೮)	ಸಂಚಿಕೆ ೧೫೨
Volume 161	BENGALURU, TUESDAY, 04, AUGUST, 2026 (SHRAVANA , 13, SHAKAVARSHA, 1948)	Issue 152

ಭಾಗ ೩
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 538 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31.07.2026.

ಅಧಿಸೂಚನೆ

ಖಜಾನೆ-2 ಯೋಜನೆಯ ಸುರಕ್ಷತೆ ಮತ್ತು ಕಾರ್ಯಕ್ಷಮತೆಗಾಗಿ ಅವಶ್ಯವಿರುವ ತಾಂತ್ರಿಕ ಸೇವೆಗಳನ್ನು IBM ಮತ್ತು Red Hat ಸಂಸ್ಥೆಗಳಿಂದ ಎರಡು ವರ್ಷಗಳ ಅವಧಿಗೆ ಒಟ್ಟು ರೂ.54,85,000/- (GST ಯನ್ನು ಹೊರತುಪಡಿಸಿ)ಗಳ ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಖಜಾನೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಖಜಾನೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1037

ಕರ್ನಾಟಕ ಸರ್ಕಾರ

ಸಂಖ್ಯೆ.ಅಇ 179 ವೆಚ್ಚ-12/2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ| ಬಿ.ಆರ್ ಅಂಬೇಡ್ಕರ್ ವೀಧಿ.
ಬೆಂಗಳೂರು, ದಿನಾಂಕ:24.07.2026.

ಅಧಿಸೂಚನೆ

ಸರ್ಕಾರಿ ಕಾರ್ಯಕ್ರಮಗಳು, ಸಮಾರಂಭಗಳು, ಮುದ್ರಣ, ಸಾಮಾಜಿಕ ಮಾಧ್ಯಮ ಹಾಗೂ ಇತರೆ ಚಟುವಟಿಕೆಗಳಿಗೆ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್ (KSMC&A) ಸಂಸ್ಥೆಯ ಸೇವೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಗರಿಷ್ಠ ರೂ.200.00 ಲಕ್ಷಗಳ ಮಿತಿಯಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಷರತ್ತುಗಳು:

1. ಸದರಿ ವಿನಾಯಿತಿಯಡಿ ಸರ್ಕಾರದ ವಿವಿಧ ಇಲಾಖೆಗಳು, ನಿಗಮ/ಮಂಡಳಿಗಳಿಗೆ ಕೆಳಕಂಡ ವಿಷಯಗಳ ಸಂಬಂಧ ಸೇವೆ/ಸಾಮಗ್ರಿ ಒದಗಿಸತಕ್ಕದ್ದು.

   I. ಸರ್ಕಾರದ ಕಾರ್ಯಕ್ರಮ, ಸಮಾವೇಶ, ಸೆಮಿನಾರ್. ವರ್ಕ್‌ಶಾಪ್ ಮತ್ತು ಸಮಾರಂಭಗಳ ಆಯೋಜನೆ ಕುರಿತಾಗಿ ವೇದಿಕೆ ನಿರ್ಮಾಣ, ಪೀಠೋಪಕರಣ ಹಾಗೂ ಇತರೆ ಪೂರಕ ವ್ಯವಸ್ಥೆ.

   II. ಮುದ್ರಣ, ಎಲೆಕ್ಟ್ರಾನಿಕ್ ಮತ್ತು ಸಮೂಹ ಮಾಧ್ಯಮಗಳಲ್ಲಿ ಜಾಹೀರಾತು ಮತ್ತು ಪ್ರಚಾರ ಕುರಿತಾದ ಸೇವೆ ಮತ್ತು ಅದರ ಸಂಬಂಧ ಛಾಯಾಚಿತ್ರ ತಯಾರಿಕೆ. ವಿಡಿಯೋ ಚಿತ್ರೀಕರಣ, ಡಾಕ್ಯುಮೆಂಟ್ರಿ ಚಿತ್ರೀಕರಣ, ಜಾಹೀರಾತು ಫಲಕಗಳ ಪೂರೈಕೆ ಸೇವೆಗಳು.

2. ಸರ್ಕಾರದ ಇಲಾಖೆ. ನಿಗಮ/ಮಂಡಳಿಗಳಿಗೆ ಸಮಂಜಸ ದರದಲ್ಲಿ ಸೇವೆಯನ್ನು ಒದಗಿಸುವುದನ್ನು ಖಚಿತಪಡಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಮೊತ್ತವನ್ನು ವಿಧಿಸತಕ್ಕದ್ದಲ್ಲ.

3. ಸದರಿ ವಿನಾಯಿತಿಯಡಿ ಸೇವೆಯನ್ನು ಒದಗಿಸುವ ಸಂದರ್ಭದಲ್ಲಿ ಮೆ: KSMC&A ಸಂಸ್ಥೆಯು ಕೆ.ಟಿ.ಪಿ.ಪಿ ಕಾಯ್ದೆಯ ಅವಕಾಶಗಳಿಗೆ ಅನುಸಾರವಾಗಿ ಪಡೆದು ಒದಗಿಸತಕ್ಕದ್ದು.

4. ಸರ್ಕಾರದ ವಿವಿಧ ಸಂಗ್ರಹಣಾ ಸಂಸ್ಥೆಗಳು ಸಮಂಜಸ ದರದಲ್ಲಿ ಉತ್ತಮ ಗುಣಮಟ್ಟದ ಸೇವೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1038

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 302 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,ಡಾ|| ಬಿ.ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:23.07.2026.

ಅಧಿಸೂಚನೆ

2026-27ನೇ ಸಾಲಿಗೆ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಹಾಗೂ ಆಶ್ರಮ ಶಾಲೆ ವಿದ್ಯಾರ್ಥಿಗಳಿಗೆ ನಿರ್ಮಲ ಮತ್ತು ಸಿರಿಗಂಧ ಕಿಟ್‌ಗಳನ್ನು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ಸಂಸ್ಥೆಯಿಂದ ರೂ.5231.15 ಲಕ್ಷಗಳ ವೆಚ್ಚದಲ್ಲಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಹಿಂದುಳಿದ ವರ್ಗಗಳ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಹಿಂದುಳಿದ ವರ್ಗಗಳ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1039

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 528 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27.07.2026

ಅಧಿಸೂಚನೆ

ಜೀವನ್ ಭೀಮಾನಗರದ ಗ್ರೂಪ್ ಎ. ಬಿ. ಸಿ & ಡಿ ಮಾದರಿಯ ವಸತಿಗೃಹಗಳಲ್ಲಿ ಈ ಕೆಳಕಂಡ ದುರಸ್ತಿ ಕಾಮಗಾರಿಗಳನ್ನು ರೂ.49.95 ಲಕ್ಷ ವೆಚ್ಚದಲ್ಲಿ ನೇರವಾಗಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ	ಕಾಮಗಾರಿಗಳ ವಿವರ	ಮೊತ್ತ.
1	Prevention of Leakage at Toilets, Providing Internal Painting and Replacement of damaged toilet flooring and other allied works at Group A Officers Quarters at Multistore Building, Jeevanbhimanagara, Bengaluru.	9.95
2	Prevention of Leakage at Toilets, Renovation of Kitchen and Toiles, Providing Frontyard and Backyard tiles, Replacement of damaged fencing and other allied works at B Type Quarters at Jeevanbhimanagara, Bengaluru.	30.50
3	Prevention of Leakage from Roof slab and Toilet floors, Providing and fixing Wardrobe, Painting and other repair works at D Type Quarters at Jeevanbhimanagara, Bengaluru.	9.50
	ಒಟ್ಟು	49.95

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1040

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 536 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:28.07.2026.

ಅಧಿಸೂಚನೆ

ಮಾನ್ಯ ಡಾ. ಆರತಿ ಕೃಷ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ತು, ಇವರಿಗೆ ಹಂಚಿಕೆಯಾಗಿರುವ ಶಾಸಕರ ಭವನದ ಕೊಠಡಿ ಸಂಖ್ಯೆ:16 ರಲ್ಲಿ "Providing painting, false ceiling to hall, polishing, renovation to bathrooms and kitchen, wooden flooring, providing storage unit and other allied works" ದುರಸ್ತಿ ಕಾಮಗಾರಿಗಳನ್ನು ರೂ.13.30 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1041

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 560 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27.07.2026.

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಸೇವೆಗಳ ವಿತರಣಾ ವ್ಯವಸ್ಥೆ ಕುರಿತು ನಾಗರಿಕರ ಅಭಿಪ್ರಾಯ ತಿಳಿಯಲು ಸಾರ್ವಜನಿಕ ಸಮೀಕ್ಷಾ ಕಾರ್ಯವನ್ನು ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ (IIPA), ಕರ್ನಾಟಕ ಪ್ರಾದೇಶಿಕ ಶಾಖೆ ಇವರ ಮೂಲಕ ರೂ.16,00,000/-ಗಳ ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಒಳಾಡಳಿತ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಒಳಾಡಳಿತ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1042

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 564 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27.07.2026.

ಅಧಿಸೂಚನೆ

ರಾಜಭವನ ವ್ಯಾಪ್ತಿಯಲ್ಲಿ ಅವಶ್ಯವಿರುವ ಸ್ಥಳಗಳಲ್ಲಿ ರಾಜಭವನ ಎಂದಿರುವ ಕಡೆಗಳಲ್ಲಿ "ಲೋಕಭವನ" ಎಂದು ನಾಮಫಲಕ ಬದಲಾಯಿಸುವ ಕಾಮಗಾರಿಯನ್ನು ಒಟ್ಟಾರೆ ರೂ.14.50ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1043

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 564 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:29.07.2026.

ಅಧಿಸೂಚನೆ

ಕರ್ನಾಟಕ ಲೋಕಭವನ ಆವರಣದಲ್ಲಿನ ಈ ಕೆಳಕಂಡ ದುರಸ್ತಿ ಕಾಮಗಾರಿಗಳನ್ನು ರೂ.20.00 ಲಕ್ಷ ವೆಚ್ಚದಲ್ಲಿ ನೇರವಾಗಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(ರೂ ಲಕ್ಷಗಳಲ್ಲಿ)

ಕ್ರ.ಸಂ.	ಕಾಮಗಾರಿಗಳ ವಿವರ	ಮೊತ್ತ
1	Providing and Carrying out Essential work to be taken up during Festivals (Independence Day) at Lok Bhavan Premises, Bengaluru for the year 2026-27	20.00
	ಒಟ್ಟು	**20.00**

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ, ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1044

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 576 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:01.08.2026.

ಅಧಿಸೂಚನೆ

ಲೋಕಾಯುಕ್ತ ಸಂಸ್ಥೆಯಲ್ಲಿ ಸಮಾಲೋಚನಾ ಆಧಾರದ ಮೇಲೆ ಪಡೆಯಲಾಗಿರುವ 03 ಸಂಶೋಧನಾ ಸಹಾಯಕರ ಸೇವೆಗಳನ್ನು ದಿನಾಂಕ:16.08.2026ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಮಾಸಿಕ ತಲಾ ರೂ.33,450/-ಗಳ ಸಮಾಲೋಚನಾ ಶುಲ್ಕದೊಂದಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ, ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1045

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 581 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31.07.2026.

ಅಧಿಸೂಚನೆ

ಉಚ್ಚ ನ್ಯಾಯಾಲಯ ಕಟ್ಟಡದ 1ನೇ ಮಹಡಿಯಲ್ಲಿರುವ ಗೌರವಾನ್ವಿತ ನ್ಯಾಯಾಧೀಶರ ಕೊಠಡಿ ಸಂಖ್ಯೆ: FF-15ರಲ್ಲಿ ಈ ಕೆಳಕಂಡ ದುರಸ್ಥಿ ಮತ್ತು ಅಭಿವೃದ್ದಿ ಕಾಮಗಾರಿಗಳನ್ನು ಒಟ್ಟಾರೆ ರೂ.34.00ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾಮಗಾರಿಗಳ ವಿವರ	ಮೊತ್ತ
1	Renovation of wash room, providing storage unit/wardrobe, Main cabin table, side table, false ceiling, painting, polishing, Curtains, Emblem and other allied works in Hon'ble Judges chamber No.FF-15 at Ist Floor of Attara Kacheri, High Court Building, Bengaluru	28.80
2	Providing Electrification Power points to Computers with LAN Networking & AC Facility in Newly renovated Hon'ble Judges Chamber FF-15 at High Court of Karnataka Bangalore	5.20
	ಒಟ್ಟು	**34.00**

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1046

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 597 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:29.07.2026.

ಅಧಿಸೂಚನೆ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (SIR) ಯಡಿ ಸುಮಾರು 5.5 ಕೋಟಿ ಜಾತಿ ಪ್ರಮಾಣಪತ್ರಗಳ PDF ಪ್ರತಿಗಳನ್ನು ಸೃಷ್ಟಿಸಲು 2 ಡೇಟಾಬೇಸ್ ಸರ್ವರ್ ಹಾಗೂ 10 ಆಪ್ಲಿಕೇಶನ್ ಸರ್ವರ್ ಗಳ hosting ಸೇವೆಯನ್ನು STPI (Software Technology Parks of India) ಸಂಸ್ಥೆ, ಬೆಂಗಳೂರು ಇವರಿಂದ ಮೂರು ತಿಂಗಳ ಅವಧಿಗೆ ರೂ.51,26,361.79 (ಜಿಎಸ್‌ಟಿ ಒಳಗೊಂಡಂತೆ)ಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1047

ಕರ್ನಾಟಕ ಸರ್ಕಾರ

ಸಂಖ್ಯೆ:ಕಂಇ 60 ಮುಆಬಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 03.08.2026

ಅಧಿಸೂಚನೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಲಂ 31(7)ರ ಅನ್ವಯ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅಧಿಸೂಚಿತ ಸಂಸ್ಥೆಗಳ **ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಒಟ್ಟು 05 ಆಸ್ತಿಗಳ** ವಿವರಗಳನ್ನು ಈ ಕೆಳಕಂಡಂತೆ ಸಾರ್ವಜನಿಕ ಮತ್ತು ಭಕ್ತಾದಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ನಮೂನೆ 1(ಡಿ)						
	1	2	3	4	5	
ಕ್ರಮ ಸಂಖ್ಯೆ	ಅಧಿಸೂಚಿತ ಸಂಸ್ಥೆಯ ಹೆಸರು ಮತ್ತು ಅದು ಇರುವ ಸ್ಥಳ ಗ್ರಾಮ / ತಾಲ್ಲೂಕು/ ಜಿಲ್ಲೆ	ಸರ್ವೆ ನಂ./ ಸಿಟಿಎಸ್ ನಂ./ ಖಾತಾ ನಂ./ ಮುನ್ಸಿ.ನಂ	ಪ್ರದೇಶ/ ಅಳತೆ/ವ್ಯಾಪ್ತಿ	ಚಕ್ಕುಬಂದಿ	ಸ್ವತ್ತಿನ ವಿವರ	
					ಖಾಲಿ	ಕಟ್ಟಡ
1	ಶ್ರೀ ಏಳು ಮಕ್ಕಳ ತಾಯಿ ದೇವಸ್ಥಾನ, ಅಳ್ನಾವರ ಗ್ರಾಮ, ಅಳ್ನಾವರ ತಾಲ್ಲೂಕು, ಧಾರವಾಡ ಜಿಲ್ಲೆ	ಗ್ರಾಮಠಾಣ	91.8 ಚ.ಮೀ	ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ : ಮುನ್ಸಿಪಾಲ್ಟಿ ಕ್ವಾಟರ್ಸ	50.95 ಚ.ಮೀ	40.85 ಚ.ಮೀ
2	ಶ್ರೀ ಚೌಂಡೇಶ್ವರಿ ದೇವಸ್ಥಾನ, ಅಳ್ನಾವರ ಗ್ರಾಮ, ಅಳ್ನಾವರ ತಾಲ್ಲೂಕು, ಧಾರವಾಡ ಜಿಲ್ಲೆ	ಗ್ರಾಮಠಾಣ	296.17 ಚ.ಮೀ	ಪೂರ್ವಕ್ಕೆ : ಮಾತೃ ಡಿಸೋಜಾ ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಲೆಕಮ್ಮ ರಾಯ್ಕರ್ ದಕ್ಷಿಣಕ್ಕೆ : ರಸ್ತೆ	248.72 ಚ.ಮೀ	47.45 ಚ.ಮೀ
3	ಶ್ರೀ ಮಾರುತಿ ದೇವಸ್ಥಾನ,ಅಳ್ನಾವರ ಗ್ರಾಮ, ಅಳ್ನಾವರ ತಾಲ್ಲೂಕು, ಧಾರವಾಡ ಜಿಲ್ಲೆ	ಗ್ರಾಮಠಾಣ	195.78 ಚ.ಮೀ	ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ಬುಡ್ನೇಸಾಬ ಗಿರಿಯಾಲ ಉತ್ತರಕ್ಕೆ : ರಿಯಾಜ ದಾಸ್ತಿಕೊಪ್ಪ ದಕ್ಷಿಣಕ್ಕೆ : ರಸ್ತೆ	88.62 ಚ.ಮೀ	107.16 ಚ.ಮೀ
4	ಶ್ರೀ ಬಸವೇಶ್ವರ ದೇವಸ್ಥಾನ, ಅಳ್ನಾವರ ಗ್ರಾಮ, ಅಳ್ನಾವರ ತಾಲ್ಲೂಕು, ಧಾರವಾಡ ಜಿಲ್ಲೆ	ಗ್ರಾಮಠಾಣ	44.38 ಚ.ಮೀ	ಪೂರ್ವಕ್ಕೆ : ರಸ್ತೆ ಪಶ್ಚಿಮಕ್ಕೆ : ಎಮ್ ಸಿ ಹಿರೇಮಠ ಉತ್ತರಕ್ಕೆ : ರಸ್ತೆ ದಕ್ಷಿಣಕ್ಕೆ : ಎಮ್ ಸಿ ಹಿರೇಮಠ		44.38 ಚ.ಮೀ
5	ಶ್ರೀ ಮಾರಮ್ಮ ದೇವಿ ದೇವಸ್ಥಾನ, ಅಳ್ನಾವರ ಗ್ರಾಮ, ಅಳ್ನಾವರ ತಾಲ್ಲೂಕು, ಧಾರವಾಡ ಜಿಲ್ಲೆ	ಗ್ರಾಮಠಾಣ	293.89 ಚ.ಮೀ	ಪೂರ್ವಕ್ಕೆ : ವೀರಶೈವ ಕಲ್ಯಾಣ ಮಂಟಪ ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಅಕ್ಕಬಳಗ ಮಹಿಳಾ ಸಂಘದ ಜಾಗೆ ದಕ್ಷಿಣಕ್ಕೆ : ಬಸಣ್ಣಾ ಕಿತ್ತೂರ	268.39 ಚ.ಮೀ	25.5 ಚ.ಮೀ

ತಾಲ್ಲೂಕು: ಅಳ್ನಾವರ
ಜಿಲ್ಲೆ : ಧಾರವಾಡ
ಒಟ್ಟು ದೇವಾಲಯ ಸಂಖ್ಯೆ: 05
ಒಟ್ಟು ಆಸ್ತಿಗಳ ಸಂಖ್ಯೆ:05

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಾಲಾ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ)

PR-1048

ಇ-ಮೇಲ್: cptpa2017@gmail.com
ದೂರವಾಣಿ ಸಂಖ್ಯೆ: 080-27251114

ಚನ್ನಪಟ್ಟಣ ಯೋಜನಾ ಪ್ರಾಧಿಕಾರ

#2850, ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ-562160

ಸಂಖ್ಯೆ:ಚಯೋಪ್ರಾ/ಮ.ಯೋ.ನಕ್ಷೆ/2026-27 ದಿನಾಂಕ: 23.07.2026

:: ಸಾರ್ವನಿಕ ಪ್ರಕಟಣೆ ::
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರಡಿ)

ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಧ್ಯಂತರ ಮಹಾಯೋಜನೆಯಲ್ಲಿ ನಗರೀಕರಣ ಎಲ್ಲೆಯ ಹೊರಭಾಗದಲ್ಲಿರುವ ವ್ಯವಸಾಯ ವಲಯದಲ್ಲಿ ಪ್ರಸ್ತಾಪಿಸಿರುವ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1)ರಡಿ ಸರ್ಕಾರದ ಆದೇಶ ಸಂಖ್ಯೆ :ನಅಇ/386/ಬಿಎಂಆರ್/2025(ಇ), ಬೆಂಗಳೂರು, ದಿನಾಂಕ :07.07.2026ರಂದು ತಾತ್ಕಾಲಿಕ ಅನುಮೋದನೆಯನ್ನು ನೀಡಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕವಾಗಿ ಅನುಮೋದನೆಯಾಗಿರುವ ನಕ್ಷೆಗಳನ್ನು ಪ್ರಾಧಿಕಾರದ ಕಚೇರಿಯಲ್ಲಿ ವೀಕ್ಷಣೆಗೆ ಇಡಲಾಗಿದೆ ಹಾಗೂ ಈ ಯೋಜನಾ ಪ್ರಾಧಿಕಾರದ ಜಾಲತಾಣಾ http://www.channapatna.tpa.gov.in ರಲ್ಲಿ ಸಹಾ ವೀಕ್ಷಿಸಬಹುದಾಗಿದೆ ಸದರಿ ನಕ್ಷೆಗಳ ಬಗ್ಗೆ ಸಾರ್ವಜನಿಕರು ಸಲಹೆ/ಆಕ್ಷೇಪಣೆಗಳನ್ನು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಪೂರಕ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ.

ಸಾರ್ವಜನಿಕರು ತಮ್ಮ ಸಲಹೆ/ಆಕ್ಷೇಪಣೆಗಳನ್ನು ಪ್ರಾಧಿಕಾರಕ್ಕೆ ಖುದ್ದಾಗಿ ಅಥವಾ ನೋಂದಣಿ ಅಂಚೆಯ ಮೂಲಕ ಸದಸ್ಯ ಕಾರ್ಯದರ್ಶಿಗಳು, ಚನ್ನಪಟ್ಟಣ ಯೋಜನಾ ಪ್ರಾಧಿಕಾರ, #2850, ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ-562160 ಅಥವಾ cptpa2017@gmail.com ಇ-ಮೇಲ್ ಮೂಲಕ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ. ನಿಗದಿತ ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆ ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಅಧ್ಯಕ್ಷರು,
ಚನ್ನಪಟ್ಟಣ ಯೋಜನಾ ಪ್ರಾಧಿಕಾರ,
ಚನ್ನಪಟ್ಟಣ.

ಸಹಿ/-
ಸದಸ್ಯ ಕಾರ್ಯದರ್ಶಿಗಳು,
ಚನ್ನಪಟ್ಟಣ ಯೋಜನಾ ಪ್ರಾಧಿಕಾರ,
ಚನ್ನಪಟ್ಟಣ.

PD-115

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ/630/ಎಎಸ್‌ಡಿ/2024

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 30.07.2026

ಅಧಿಸೂಚನೆ

ವಿಷಯ: ಶ್ರೀ ವಿಶ್ವಜೀತ ಮೇಹತಾ, ತಹಶೀಲ್ದಾರ್ ಗ್ರೇಡ್-1 ಇವರಿಗೆ ಉಳಿಕೆ ಮೂಲ ವೃಂದದ ತಹಶೀಲ್ದಾರ್ ಗ್ರೇಡ್-2 ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಜೇಷ್ಠತಾ ಕ್ರಮ ಸಂಖ್ಯೆಯನ್ನು ಪರಿಷ್ಕರಿಸಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಶ್ರೀ ವಿಶ್ವಜೀತ ಮೇಹತಾ ರವರು ದಿನಾಂಕ: 01.07.2026 ರಂದು ಸಲ್ಲಿಸಿರುವ ಆಕ್ಷೇಪಣೆ / ಮನವಿ.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಕಂಇ 03 ಬಿಎಂಎಂ 2019, ದಿನಾಂಕ: 07.04.2020.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 131 ಎಎಸ್‌ಡಿ 2024, ದಿನಾಂಕ: 02.06.2026.
4. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಕಂಇ 240 ಬಿಎಂಎಂ 2026, ದಿನಾಂಕ: 28.07.2026.

** * **

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 278 ಎಎಸ್‌ಡಿ 2026, ದಿನಾಂಕ: 22.06.2026 ರಂದು ಪ್ರಕಟಿಸಿರುವ ತಹಶೀಲ್ದಾರ್ ಗ್ರೇಡ್-1 ವೃಂದದ ಕರಡು ಜೇಷ್ಠತಾ ಪಟ್ಟಿಗೆ ಉಲ್ಲೇಖ(1) ರಂತೆ ಶ್ರೀ ವಿಶ್ವಜೀತ ಮೇಹತಾ, ತಹಶೀಲ್ದಾರ್ ಗ್ರೇಡ್-1 ಇವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ತಮಗೆ ದಿನಾಂಕ: 19.12.2012 ರಂದು ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಮತ್ತು ದಿನಾಂಕ 28.07.2016 ರಂದು ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ ಬಡ್ತಿ ನೀಡಲಾಗಿದೆ. ಮುಂದುವರೆದು, ದಿನಾಂಕ: 27.11.2017 ರಂದು ಪ್ರಕಟಿಸಿದ್ದ ತಹಶೀಲ್ದಾರ್ ಗ್ರೇಡ್-1 ಅಧಿಕಾರಿಗಳ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಜೇಷ್ಠತಾ ಕ್ರಮ ಸಂಖ್ಯೆ 1010 ಇದ್ದು, ತಮಗೆ 28.07.2016ರ ಅರ್ಹತಾ ದಿನಾಂಕ ನೀಡಲಾಗಿದೆ. ಇದೇ ಜೇಷ್ಠತಾ ಪಟ್ಟಿಯಲ್ಲಿ ಅರ್ಹತಾ ದಿನಾಂಕ ಲಭ್ಯವಾಗದೇ ಇರುವ ಹಾಗೂ 25.07.2016 ರಂದು ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಬಡ್ತಿ ಹೊಂದಿದ ಮತ್ತು ಜೇಷ್ಠತೆಯಲ್ಲಿ ತಮಗಿಂತ ಕಿರಿಯ ಅಧಿಕಾರಿಗಳು ಈಗಾಗಲೇ KAS (Jr. Sc) ಹುದ್ದೆಗೆ ಬಡ್ತಿ ಹೊಂದಿರುವುದರಿಂದ ತಮಗಿಂತ ಜೇಷ್ಠತೆಯಲ್ಲಿ ಕಿರಿಯರಾದ ಶ್ರೀ ಮಹಮದ್ ಶಕೀಲ್, ಯಲ್ಲಪ್ಪ ಸುಬೇದಾರ ಮತ್ತು ಇತರರುಗಳ ಮೇಲೆ ತಮ್ಮ ಜೇಷ್ಠತೆಯನ್ನು ನಿಗಧಿಪಡಸಿ ದಿನಾಂಕ: 22.06.2026 ರಂದು ಪ್ರಕಟಿಸಿರುವ ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೂಕ್ತ ಕ್ರಮಸಂಖ್ಯೆಯಲ್ಲಿ ಸೇರಿಸುವಂತೆ ಕೋರಿರುತ್ತಾರೆ.

ಇವರ ಕೋರಿಕೆಯನ್ನು ಉಲ್ಲೇಖ(2)ರ ರಾಜ್ಯ ಮಟ್ಟದ ಶಿರಸ್ತೇದಾರರ/ಉಪ-ತಹಶೀಲ್ದಾರರ ಅಂತಿಮ ಜೇಷ್ಠತಾ ಪಟ್ಟಿಯೊಂದಿಗೆ ಸಮಗ್ರವಾಗಿ ಪರಿಶೀಲಿಸುವಂತೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಕಂಇ 630 ಎಎಸ್‌ಡಿ 2024, ದಿನಾಂಕ: 24.07.2026 ರ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು-1 ಇವರನ್ನು ಕೋರಲಾಗಿತ್ತು.

ಉಲ್ಲೇಖ(4) ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಶ್ರೀ ವಿಶ್ವಜೀತ ಮೇಹತಾ ರವರ ಸಂಪೂರ್ಣ ಸೇವಾ ವಿವರಗಳನ್ನು ಪರಿಶೀಲಿಸಿದಾಗ ಇವರೊಂದಿಗೆ 1997ರಲ್ಲಿ ಒಂದೇ ನೇಮಕಾತಿ ಆದೇಶದ ಮೂಲಕ

ನೇಮಕಗೊಂಡಿದ್ದ ನೇಮಕಾತಿ ಆದೇಶದ ಕ್ರಮ ಸಂಖ್ಯೆ: 02 ರಲ್ಲಿದ್ದ ಶ್ರೀ ಯಲ್ಲಪ್ಪ ಸುಬೇದಾರ ರವರಿಗೆ ದಿನಾಂಕ: 07.04.2020 ರಂದು ಪ್ರಕಟಿಸಿರುವ ರಾಜ್ಯ ಮಟ್ಟದ ಶಿರಸ್ತೇದಾರರ/ಉಪ-ತಹಶೀಲ್ದಾರರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಜೇಷ್ಠತಾ ಕ್ರಮ ಸಂಖ್ಯೆ: 3608ನ್ನು ನೀಡಿರುವುದರಿಂದ ಶ್ರೀ ಯಲ್ಲಪ್ಪ ಸುಬೇದಾರ ರವರಿಗಿಂತ ಜೇಷ್ಠತೆಯಲ್ಲಿ ಹಿರಿಯರಾದ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಶ್ರೀ ವಿಶ್ವಜೀತ ಮೇಹತಾ ರವರ ಜೇಷ್ಠತೆಯನ್ನು ಶ್ರೀ ಯಲ್ಲಪ್ಪ ಸುಬೇದಾರ ರವರ ಮೇಲೆ ಅಂದರೆ 3607(ಎ) ಎಂದು ಸೇರ್ಪಡೆಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಮೇಲ್ಕಂಡ ಉಲ್ಲೇಖ(4) ರ ಅಧಿಕೃತ ಜ್ಞಾಪನದಲ್ಲಿ ಶ್ರೀ ವಿಶ್ವಜೀತ ಮೇಹತಾ, ತಹಶೀಲ್ದಾರ್ ಗ್ರೇಡ್-1 ರವರಿಗೆ ದಿನಾಂಕ: 07.04.2020 ರಂದು ಪ್ರಕಟಿಸಲಾದ ರಾಜ್ಯ ಮಟ್ಟದ ಶಿರಸ್ತೇದಾರರ/ಉಪ-ತಹಶೀಲ್ದಾರರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶಿರಸ್ತೇದಾರ ವೃಂದದ ಜೇಷ್ಠತಾ ಕ್ರಮ ಸಂಖ್ಯೆಯನ್ನು 3607(ಎ) ಎಂದು ನಿಗಧಿಪಡಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(3) ರಂತೆ ಪ್ರಕಟಿಸಿರುವ ಉಳಿಕೆ ಮೂಲ ವೃಂದದ ತಹಶೀಲ್ದಾರ್ ಗ್ರೇಡ್-2 ಅಧಿಕಾರಿಗಳ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ವಿಶ್ವಜೀತ ಮೇಹತಾ ರವರಿಗೆ ನೀಡಿರುವ ಜೇಷ್ಠತಾ ಕ್ರಮ ಸಂಖ್ಯೆ(1908) ನ್ನು ಬದಲಾಯಿಸಿ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾದ ಶ್ರೀ ಯಲ್ಲಪ್ಪ ಸುಬೇದಾರ ರವರ ಜೇಷ್ಠತಾ ಕ್ರಮ ಸಂಖ್ಯೆ (1728) ರ ಮೇಲೆ ಅಂದರೆ 1727(ಎ) ಎಂದು ನಮೂದಿಸಿ ದಿನಾಂಕ: 18.07.2014 ಕ್ಕೆ ಅರ್ಹತಾ ದಿನಾಂಕ ನಿಗಧಿಪಡಿಸಿ ಲಗತ್ತಿಸಿರುವ ಅನುಬಂಧದಂತೆ ಅಧಿಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ

ಅಧಿಸೂಚನೆ ಸಂಖ್ಯೆ: ಕಂಇ 630 ಎಎಸ್‌ಡಿ 2024, ದಿನಾಂಕ: 30.07.2026ಕ್ಕೆ ಅನುಬಂಧ

ದಿನಾಂಕ: 02.06.2026 ರಂದು ಪ್ರಕಟಿಸಲಾದ Non-HK ತಹಶೀಲ್ದಾರ್ ಗ್ರೇಡ್-2 ವೃಂದದ ಜೇಷ್ಠತಾ ಕ್ರ. ಸಂ.	ದಿನಾಂಕ: 07.04.2020 ರಂದು ಪ್ರಕಟಿಸಲಾದ ರಾಜ್ಯ ಮಟ್ಟದ ಶಿರಸ್ತೇದಾರ / ಉಪ ತಹಶೀಲ್ದಾರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯ ಪರಿಷ್ಕೃತ ಜೇಷ್ಠತಾ ಕ್ರ. ಸಂ	ಅಧಿಕಾರಿಯ ಹೆಸರು (ಶ್ರೀಮತಿ / ಶ್ರೀ)	ಎಸ್.ಸಿ/ ಎಸ್.ಟಿ	ಜನ್ಮ ದಿನಾಂಕ	ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಮುಂಬಡ್ತಿ ಹೊಂದಿದ ದಿನಾಂಕ	ತಹಶೀಲ್ದಾರ್ ಗ್ರೇಡ್-2 ವೃಂದದಲ್ಲಿ ಅರ್ಹತಾ ದಿನಾಂಕ	ಷರಾ
1727	3594/1160	ವಿ. ಕೆ. ಕುಲಕರ್ಣಿ		27.07.1955	06.08.2014	18.07.2014	
1727(ಎ)	**3607(ಎ)/1262(ಎ)**	**ವಿಶ್ವಜೀತ ಮೇಹತಾ**	**SC**	**28.12.1969**	**19.12.2012**	**18.07.2014**	
1728	3608/1263	ಯಲ್ಲಪ್ಪ ಸುಬೇದಾರ	ST	09.10.1973	19.12.2012	18.07.2014	

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ

PR-1049

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 100 ಎಸ್.ಪಿ.ಕ್ಯೂ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ
ಬೆಂಗಳೂರು, ದಿನಾಂಕ: 03.08.2026

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ಕಲಂ 28(4) ರನ್ವಯ ಅಂತಿಮ ಅಧಿಸೂಚನೆ.

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕ ಕಾಯ್ದೆ ಸಂಖ್ಯೆ:18) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ದಿನಾಂಕಃ 18-04-2026 ರ ಅಧಿಸೂಚನೆ, ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ-3 ರ ವಿಶೇಷ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆಃ ಸಿಐ 100 ಎಸ್.ಪಿ.ಕ್ಯೂ 2022 ದಿನಾಂಕ 18-04-2026 ರ ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಪ್ರಕಾರ ಸರ್ಕಾರ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು **"ಮೆ ಟಾಟಾ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ರಸ್ತೆ ನಿರ್ಮಾಣದ ಯೋಜನೆಗಾಗಿ"** ಸ್ವಾಧೀನಪಡಿಸಿಕೊಳ್ಳಲು ಇಚ್ಛೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಪ್ರಕಟಿಸಲಾಗಿರುವ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಆದುದರಿಂದ 1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(4) ರ (1966ರ ಕರ್ನಾಟಕ ಕಾಯ್ದೆ ಸಂಖ್ಯೆಃ 18)ರ ಮೇರೆಗೆ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರ ಕೆಳಗೆ ನಮೂದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆಂದು ಈ ಮೂಲಕ ಘೋಷಿಸಲಾಗಿದೆ.

ಅನುಸೂಚಿ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ			ತರಹೆ	ಆಕಾರ	ಚೆಕ್ಕುಬಂದಿ			
				ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11	12	13
ಗ್ರಾಮ: ಬೆಳ್ಳೂರು ಹೋಬಳಿ: ನರಸಾಪುರ ತಾಲ್ಲೂಕು: ಕೋಲಾರ ಜಿಲ್ಲೆ: ಕೋಲಾರ												
1.	ಎಂ.ವಿ. ವಿನಯನಾಥ್ ಬಿನ್ ಎಂ. ವೆಂಕಟರಾಮ್-ಭೂ.ಪ ಎಂ.ವಿ. ವಿನಯ್ ನಾಗ್ ಬಿನ್ ಎಂ. ವೆಂಕಟರಾಮ್ –ಭೂ.ಪ ಎಂ.ವಿ. ವಿನಯ್ ನಾಗ್ ಬಿನ್ ಎಂ. ವೆಂಕಟರಾಮ	ದೇವ ವೃಂದ ಇಂಡಸ್ಟ್ರೀಸ್ ಉಮಾ ಸುರೇಶ್ ಭೂ.ಪ	267/1 267/3	1-00 0-02	-	1-00 0-02	-	ಖುಷ್ಕಿ	ಹಳ್ಳ	267/1ರ ಉಳಿಕೆ	ಸ.ನಂ. 268	ಗ್ರಾಮದ ಗಡಿ
2.	ವಿಜಯ ಎಂ.ವಿ. ರಾಮ್ ಕೋ೦ ಎಂ. ವೆಂಕಟರಾಮ್-ಭೂ.ಪ ಬಿ.ಜಿ. ರಾಮಕೃಷ್ಣಪ್ಪ ಬಿನ್ ಗಂಗಪ್ಪ –ಭೂ.ಪ	ಉಮಾ ಸುರೇಶ್ ಭೂ.ಪ	268	0-33	-	0-33			ಸ.ನಂ. 266	268 ರ ಉಳಿಕೆ	ಕೆರೆ	ಸ.ನಂ. 267
ಒಟ್ಟು				**1-35**	**-**	**1-35**						

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

-:: ಫೋಷ್ಣೂರೆ ::-

ಕ್ರ. ಸಂ.	ತಾಲ್ಲೂಕು	ಹೋಬಳಿ	ಗ್ರಾಮದ ಹೆಸರು	ಭೂ ಸ್ವಾಧೀನ ವಿಸ್ತೀರ್ಣ ಎ-ಗು		
				ಐನು	ಖರಾಬು	ಬಾಕಿ
1	ಕೋಲಾರ	ನರಸಾಪುರ	ಬೆಳ್ಳೂರು	1-35	-	1-35
			ಒಟ್ಟು ವಿಸ್ತೀರ್ಣ	**1-35**	**-**	**1-35**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ನದೀಮ್ ಅಹ್ಮದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಕೈ.ಅ)

PR-1050

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

P S
BASAVARAJU